ಪರಂಪರೆಯಿಂದ ಬಂದದ್ದು, ಎಷ್ಟು ವಿರೋಧದಲ್ಲಿ ಹುಟ್ಟಿದ್ದು, ಹೊಸ ಪರಂಪರೆಯ ಸೃಷ್ಟಿಯ ಅಗತ್ಯಕ್ಕೆ ಆದದ್ದು ಅನ್ನುವುದು ಕೂಡ ಮುಖ್ಯವಾಗುತ್ತದೆ.

'ಪರಂಪರೆ' ಮತ್ತು 'ಸಂಸ್ಕೃತಿ' ಅನ್ನುವ ಪದಗಳ ಅರ್ಥವನ್ನು ಸ್ಫೋಟಕ ಸಿಡಿಮದ್ದಿನಂತೆ ಮಾಡಿಟ್ಟುಕೊಂಡಿರುವ ಕಾಲದಲ್ಲಿ ಬದುಕಿದ್ದೇವೆ. ಅವೆರಡೂ ನಾವು ಕಟ್ಟಿಕೊಂಡ ಸಂಗತಿಗಳು, ವಾಸ್ತವವಲ್ಲ. ನಮ್ಮ ಈ ದಿನದ ಉದ್ದೇಶಕ್ಕೆ ಸಮರ್ಥನೆಯಾಗಿ ಬಳಸುತ್ತೇವೆ ಅನ್ನುವಷ್ಟು ಅರಿವು ಮೂಡಿದರೂ ಬದುಕು ಸ್ವಸ್ಥವಾಗುತ್ತದೆ.

**◆ 'ವಿಜ್ಞಾನ', 'ತಂತ್ರಜ್ಞಾನ' ಮತ್ತು 'ರಾಜಕೀಯ' ಎನ್ನುವುದು ಇಂದು ಶಕ್ತಿಕೇಂದ್ರವಾಗಿದೆ. ಇವುಗಳ ಮಧ್ಯೆ ಸಾಹಿತ್ಯ ತನ್ನ ಶಕ್ತಿಯಾದ ಮನುಷ್ಯತ್ವವನ್ನು ಉಳಿಸಿಕೊಂಡಿದೆಯೇ? ಸಾಹಿತ್ಯಕ್ಕೆ ಆ ಒಂದು ಶಕ್ತಿ ಅನ್ನುವುದು ಇದೆಯೇ ಎಂಬ ಅನುಮಾನದಲ್ಲಿ ಈ ಕಾಲವಿದೆ. ಈ ಸಂಕೀರ್ಣತೆಯನ್ನು ನೀವು ಹೇಗೆ ನಿರ್ವಚನ ಮಾಡುತ್ತೀರಿ?**

'ಡಿಮಾಲಿಶನ್ ಆಫ್ ಎಕ್ಸ್‌ಪೀರಿಯನ್ಸ್' ಅನ್ನುವ ಪುಸ್ತಕ ಕಣ್ಣಿಗೆ ಬಿತ್ತು. ತಂತ್ರಜ್ಞಾನ ಬೆಳೆದ ಹಾಗೆ ನಾವು ಅನುಭವಗಳಿಂದ ವಂಚಿತರಾಗುತ್ತಿದ್ದೇವೆ; ಅನುಭವಗಳ ಕೃತಕ ಸೃಷ್ಟಿಯೇ ಅತ್ಯುನ್ನತ ಬೌದ್ಧಿಕತೆಯಾಗುತ್ತಿದೆ ಅನ್ನುವ ವಾದವನ್ನು ಅದು ಒಪ್ಪುವ ಹಾಗೆ ಮುಂದಿಡುತ್ತದೆ. ತಂತ್ರಜ್ಞಾನ ಮತ್ತು ರಾಜಕೀಯ ಎಂದೂ ಬಿಡಿಸಲಾಗದ, ಪ್ರತ್ಯೇಕವಾಗಿ ನೋಡಲಾಗದ ಸಂಗತಿಗಳು. ಅಂತರ್ಜಾಲವು ರೂಪುಗೊಂಡದ್ದೂ ಮಿಲಿಟರಿಯ ಅಗತ್ಯಕ್ಕೆ, ವಾಯುಸಂಚಾರ ಅಭಿವೃದ್ಧಿಯಾದದ್ದೂ ಯುದ್ಧಗಳ ಅಗತ್ಯಕ್ಕೆ ಅನ್ನುವ ಎರಡು ನಿದರ್ಶನಗಳು ಸಾಕು. ಬಂಡವಾಳಶಾಹಿ ಬಲಗೊಳ್ಳಲು ಗ್ರಾಹಕರನ್ನು ಮತ್ತು ಸಾಧ್ಯವಾದಷ್ಟೂ ಕಡಿಮೆ ದುಡ್ಡಿಗೆ ದುಡಿವ ವರ್ಗವನ್ನು ಅಪೇಕ್ಷಿಸುತ್ತದೆ; ಅದಕ್ಕೆ ತಕ್ಕ ಹಾಗೆ ರಾಜಕಾರಣಗಳು ಮತದಾರರನ್ನು ಸೃಷ್ಟಿಸುವ, ಮಾಯ ಮಾಡುವ ಕೆಲಸದಲ್ಲಿ ತೊಡಗುತ್ತವೆ. ಹೀಗಿರುವಾಗ 'ಮನುಷ್ಯತ್ವ'ಕ್ಕೆ (ಏನು ಹಾಗಂದರೆ ಅನ್ನುವುದೂ ಚರ್ಚಾಸ್ಪದ ಅನ್ನುವುದು ಗೊತ್ತು) ಪ್ರಾಮುಖ್ಯ ನೀಡುವ ಸಾಹಿತ್ಯ ಮತ್ತು ವಿಮರ್ಶೆಗಳು ತಂತ್ರಜ್ಞಾನ ಆಧಾರಿತ ಸಮಾಜಕ್ಕೆ, ರಾಜಕೀಯಕ್ಕೆ ಅಪಾಯಕಾರಿಯಾಗಿ ಕಾಣುತ್ತವೆ. ಅಲ್ಲವೇ?



**◆ ಎಮೋಜಿಗಳ ಮೂಲಕವೇ ವೇಗವಾಗಿ ಭಾವನೆಯ ಹಸ್ತಾಂತರ ನಡೆಯುತ್ತಿರುವ ಈ ಕಾಲದಲ್ಲಿ ಭಾಷೆಯ ಅಗತ್ಯ ಇದೆಯೇ? ಭಾಷೆಯನ್ನು ಬಳಕೆ ಮಾಡುವ ಪರಿಣಾಮಕಾರಿಯಾದ ಸಂವಹನ ಕೊರತೆಯು ಕಾಣಿಸುತ್ತಿದೆಯಲ್ಲವೇ?**

ಭಾಷೆ ಅನ್ನುವುದು ಸಂವಹನಕ್ಕಾಗಿ ಮಾತ್ರ ಇಲ್ಲ. ಭಾಷೆ ಅನ್ನುವುದು ವಾಸ್ತವವನ್ನು ವರ್ಣಿಸುವುದಕ್ಕಾಗಿ ಇಲ್ಲ. ಯಾವುದನ್ನು ನಾವು ವಾಸ್ತವ ಅನ್ನುತ್ತೇವೋ ಅದು ಭಾಷೆಯ ಮೂಲಕ ನಿರ್ಮಾಣವಾದದ್ದೇ ಆಗಿದೆ. ಯಾವುದನ್ನು ತುಂಬ ಬೆಲೆಯುಳ್ಳ ಕೃತಿಗಳು ಎಂದು ಕರೆಯುತ್ತೇವೋ ಅವೆಲ್ಲವೂ ನುಡಿಯ ಮೂಲಕವೇ ಲೋಕವನ್ನು, ವಾಸ್ತವವನ್ನು ಕಟ್ಟಿಕೊಡುತ್ತವೆ. ಲೇಖಕರಿಗೆ ತಾವು ಇರುವುದನ್ನು ವರ್ಣಿಸುತ್ತಿಲ್ಲ, ವಾಸ್ತವವನ್ನು

ತಂತ್ರಜ್ಞಾನ ಮತ್ತು ರಾಜಕೀಯ ಎಂದೂ ಬಿಡಿಸಲಾಗದ, ಪ್ರತ್ಯೇಕವಾಗಿ ನೋಡಲಾಗದ ಸಂಗತಿಗಳು. ಅಂತರ್ಜಾಲವು ರೂಪುಗೊಂಡದ್ದೂ ಮಿಲಿಟರಿಯ ಅಗತ್ಯಕ್ಕೆ, ವಾಯುಸಂಚಾರ ಅಭಿವೃದ್ಧಿಯಾದದ್ದೂ ಯುದ್ಧಗಳ ಅಗತ್ಯಕ್ಕೆ ಅನ್ನುವ ಎರಡು ನಿದರ್ಶನಗಳು ಸಾಕು.

